## ಇಲ್ಲಿಯವರೆಗೆ



ನೇಪಾಳದ ಸೈಕಲ್ ಪ್ರವಾಸ ಮುಗಿಸಿ ಬಂದ ಭಾವೇಶ್ ಅವರನ್ನು ಕುಟುಂಬದ ಕಷ್ಟಗಳ ಪರಂಪರೆ ಎದುರುಗೊಂಡಿತು. ಅಪ್ಪನ ಅನಾರೋಗ್ಯದ ನಡುವೆ ಅಮ್ಮನಿಗೂ ಕ್ಯಾನ್ಸರ್ ತಗುಲಿತು. ಕ್ಯಾನ್ಸರ್ ಚಿಕಿತ್ಸೆಯ ಖರ್ಚು ಕೈಮೀರಿದ್ದಾಗಿತ್ತು. ಆಸ್ತಿಯನ್ನು ಮಾರಿ, ಬಂಧುಮಿತ್ರರಿಂದ ಸಾಲ ಪಡೆದು, ಸಂಘಸಂಸ್ಥೆಗಳ ಸಹಾಯ ಪಡೆದು ಅಮ್ಮನಿಗೆ ಕೀಮೊ ಚಿಕಿತ್ಸೆ ಕೊಡಿಸಲು ಭಾವೇಶ್ ಪ್ರಯತ್ನಿಸಿದರು. ಆದರೆ, ಯಾವ ಪ್ರಯತ್ನವೂ ಫಲಕಾರಿಯಾಗಲಿಲ್ಲ. ಮಗನ ಪಾಲಿಗೆ ಕಣ್ಣಾಗಿದ್ದ ತಾಯಿ ಕೊನೆಯುಸಿರೆಳೆದರು. ಮೊದಲ ಬಾರಿಗೆ ಭಾವೇಶ್‌ರನ್ನು ತಮ್ಮ ದೇಹದ ವೈಕಲ್ಯ ಕಾಡತೊಡಗಿ, ಮುಂದಿನ ದಾರಿ ಕತ್ತಲೆಯದೆನಿಸಿತು.

ಶಿಫಾರಸ್ಸು ಪತ್ರವಿತ್ತು. ಹಾಗಾಗಿ ಕೆಲಸ ಸುಲಭವಾಯಿತು. ಅಲ್ಲಿದ್ದ ಆಯುರ್ವೇದ ವೈದ್ಯರ ಇಡೀ ತಂಡ ಈತನ ಕೇಸನ್ನು ಅರ್ಥ ಮಾಡಿಕೊಂಡಿತು. ಕಣ್ಣುಗಳನ್ನು ಪರೀಕ್ಷೆ ಮಾಡಿದರು. ಅವರದೊಂದು ಫೈಲ್ ಮಾಡಿ ತಮ್ಮ ತಪಾಸಣೆಯ ಬಗ್ಗೆ ಅದರಲ್ಲಿ ಬರೆದರು. ಫಲಿತಾಂಶ ಇಷ್ಟೇ ಇತ್ತು. ಆಯುರ್ವೇದದಲ್ಲಿಯೂ ಇವರ ಕಣ್ಣುಗಳಿಗೆ ಯಾವುದೇ ಚಿಕಿತ್ಸೆ ಇಲ್ಲ ಎಂದು ಫೈಲನ್ನು ಗೆಳೆಯನ ಕೈಗೆ ಕೊಟ್ಟರು. ಆದರೂ ನೀವು ಒಮ್ಮೆ ಬಾಬಾ ರಾಮ್‌ದೇವ್ ಅವರನ್ನು ಸಂಜೆ ಭೆಟ್ಟಿಯಾಗಿ ಎಂದರು. ಸಾಕಷ್ಟು ಪ್ರಯತ್ನದ ನಂತರ ಆ ಸಂಜೆ ಬಾಬಾ ಅವರನ್ನು ಭೆಟ್ಟಿಯಾಗಲು ಸಾಧ್ಯವಾಯಿತು.

ಅವರು ಹೇಳಿದ ಪ್ರಾಣಾಯಾಮದ ಬಗ್ಗೆ ಅದರಲ್ಲೂ ಕಪಾಲಭಾತಿ ಮತ್ತು ಅನುಲೋಮ ವಿಲೋಮದ ಬಗ್ಗೆ ಭಾವೇಶ್ ಅವರಿಗೆ ಸಾಕಷ್ಟು ವಿಶ್ವಾಸವಿತ್ತು. ಅವುಗಳನ್ನು ಅವರು ಮಾಡುವಾಗ ದೇಹ ಮನಸ್ಸುಗಳಿಗೆ ಹಿತವಿತ್ತು. ಬಾಬಾ ಅವರು ಭಾವೇಶ್‌ಗೆ ಹೇಳಿದರು 'ಹರಿದ್ವಾರಕ್ಕೆ ಬಂದಿದ್ದೀಯ. ನಾಳೆಯಿಂದ ಒಂದು ವಾರ ನಡೆಯುವ ಯೋಗ ಶಿಬಿರದಲ್ಲಿ ಪಾಲ್ಗೊಂಡು ಹೋಗು'.

ಬಾಬಾ ಅವರ ಮಾತುಗಳನ್ನು ಕೇಳುತ್ತಿದ್ದಂತೆ, ಭಾವೇಶ್ ಒಳಗೇ ಕುಸಿದರು. ಇಷ್ಟೆಲ್ಲ ದಿನಗಳನ್ನು ವ್ಯರ್ಥ ಮಾಡಿ ಇಷ್ಟು ದೂರ ಬಂದೆ ಅನಿಸಿತ್ತು. ಆದರೆ ಬಾಬಾ ಅವರ ಆದೇಶವನ್ನು ಧಿಕ್ಕರಿಸಲು ಮನಸ್ಸಾಗಲಿಲ್ಲ. ಮರುದಿನ ಐದೂವರೆ ಗಂಟೆಯ ಆ ಶಿಬಿರಕ್ಕೆ ಹಾಜರಾದರು. ಬಹು ದೊಡ್ಡ ಸಂಖ್ಯೆಯಲ್ಲಿ ಅಲ್ಲಿ ಜನ ಕೂಡಿದ್ದರು. ಬಾಬಾ ಅವರು ಬಂದು ಶಿಬಿರವನ್ನು ಆರಂಭಿಸಿದರು. ಅವರು ಧ್ಯಾನದ ಮಹತ್ವವನ್ನು ಹೇಳಿ ಎಲ್ಲರಿಗೂ ತಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳಲು ಹೇಳಿದರು. 'ನಿಮ್ಮ ಮನಸ್ಸಿನ ಒಳಗೆ ಇಣುಕಿ, ಮನಸ್ಸನ್ನು ಏಕಾಗ್ರತೆಯತ್ತ ಹೊರಳಿಸಿ, ಧ್ಯಾನಸ್ಥರಾಗಲು ಪ್ರಯತ್ನಿಸಿ' ಎಂದರು. ಎಲ್ಲರಿಗೂ ಹತ್ತು ನಿಮಿಷ ಕಣ್ಣುಗಳನ್ನು ಮುಚ್ಚಿಕೊಳ್ಳಲು ಆಜ್ಞೆ ಮಾಡಿದರು. ಈ ಶಿಬಿರದಲ್ಲಿ ಸ್ವಯಂಸೇವಕರು ಓಡಾಡುತ್ತಿದ್ದರು. ಅವರು 'ಬಾಬಾ ಹೇಳುವ ರೀತಿಯಲ್ಲಿ ಮಾಡಿ' ಎಂದು ಶಿಬಿರಾರ್ಥಿಗಳಿಗೆ ಹೇಳುತ್ತಿದ್ದರು. 'ಕಣ್ಣುಗಳನ್ನು ಮುಚ್ಚಿ. ಅತ್ತ ಇತ್ತ ನೋಡಬೇಡಿ'. ವೇದಿಕೆಯ ಮೇಲೆ ಬಾಬಾ, ಇಲ್ಲಿ ಕೆಳಗೆ ಸ್ವಯಂಸೇವಕರು 'ಕಣ್ಣು ಮುಚ್ಚಿ, ಕಣ್ಣು ಮುಚ್ಚಿ' ಎಂದು ಪದೇ ಪದೇ ಹೇಳುತ್ತಿದ್ದರು. ಭಾವೇಶ್ ಅವರ ಕಣ್ಣುಗಳು ತೆರೆದರೂ ಮುಚ್ಚಿದಂತೆಯೆ. ಭಾವೇಶ್ ಅವರಿಗೆ ಅಲ್ಲಿಂದ ಯಾವಾಗ ಎದ್ದು ಮಹಾಬಲೇಶ್ವರಕ್ಕೆ ಹೋಗುತ್ತೇನೆ ಅನಿಸತೊಡಗಿತು. 'ತನಗಿರುವ ಒಂದು ಹೋಟೆಲ್ ನೌಕರಿಯೂ ಕಳೆದು ಹೋದರೆ' ಎಂಬ ಆತಂಕ ಕಾಡಿತು. ಪದೇ ಪದೇ 'ಕಣ್ಣು ಮುಚ್ಚಿ, ಕಣ್ಣು ಮುಚ್ಚಿ' ಮಾತುಗಳನ್ನು ಕೇಳುತ್ತಿದ್ದಂತೆ ಬೇಸರವಾಗಿದ್ದ ಅವರ ಮನಸ್ಸಿಗೆ ತಕ್ಷಣ ಏನೋ ಹೊಳೆಯಿತು.

ಅವರಿಗೆ ಅನಿಸಿತು, ತಾನೆಂತಹ ಭಾಗ್ಯವಂತ. ಇಲ್ಲಿರುವ ನೂರಾರು ಜನರಿಗೆ ಪದೇ ಪದೇ ಹೇಳಿಯೂ ಅದೆಷ್ಟೇ ಪ್ರಯತ್ನಿಸಿಯೂ, ಕೆಲವು ನಿಮಿಷಗಳು ಕೂಡಾ ಕಣ್ಣು ಮುಚ್ಚಲು ಸಾಧ್ಯವಾಗುತ್ತಿಲ್ಲ. ಇಲ್ಲಿ ತನಗೆ ಕಣ್ಣುಗಳನ್ನು ಮುಚ್ಚುವ ತೆರೆಯುವ ಜಂಜಾಟವೇ ಇಲ್ಲ. ತಾನು ಏಕಾಗ್ರತೆಯ ಪ್ರಕ್ರಿಯೆಯಲ್ಲಿ ಈ ಎಲ್ಲ ಜನರಿಗಿಂತ ಒಂದೆರಡು ಹೆಜ್ಜೆ ಮುಂದಿರುವೆ. ಅವತ್ತು ಅವರಿಗೆ ಅನಿಸಿತು, ಕಣ್ಣು ಕಾಣದೆ ಇರುವುದು ತನ್ನ ದೌರ್ಬಲ್ಯವಲ್ಲ. ಅದು ತನ್ನ ತಾಕತ್ತೂ ಆಗಬಲ್ಲದು, ಅದು ತನ್ನ ಅಂತಃಶಕ್ತಿಯನ್ನು ಜಾಗೃತಗೊಳಿಸಬಲ್ಲದು. ಇನ್ನು ಬಾಹ್ಯದೃಷ್ಟಿಗಾಗಿ ಅಲ್ಲಿ ಇಲ್ಲಿ ಅಲೆಯುವುದು ಬೇಡ. ನನ್ನ ಅಂತಃಚಕ್ಷುಗಳು ಸದಾ ತೆರೆದಿವೆ. ಬದುಕು ನನ್ನ ಒಂದು ಸಾಮರ್ಥ್ಯವನ್ನು ಕಿತ್ತುಕೊಂಡಿರಬಹುದು. ಬದುಕು ನನಗೆ ನೂರೊಂದು ಸಾಮರ್ಥ್ಯಗಳನ್ನು ಕರುಣಿಸಿದೆ. ಇರುವುದೆಲ್ಲವ ಮರೆತು, ಇಲ್ಲದುದಕೆ ತುಡಿವುದೇತಕೆ? ಭಾವೇಶ್ ಅವರಿಗೆ ಜ್ಞಾನೋದಯದ ಮತ್ತೊಂದು ಕ್ಷಣವದು.

ಈ ಅಂತಃಶಕ್ತಿಯಿಂದಲೇ ನಾನು ಜೀವನದಲ್ಲಿ ಮುಂದೆ ನಡೆಯುವೆ ಎಂದು ನಿರ್ಧರಿಸಿದ ಭಾವೇಶ್ ಅವರಿಗೆ, ಈ ಕ್ಷಣ ಬದುಕಿನ ಹೊಸದೊಂದು ತಿರುವು ಆರಂಭವಾಗಿತ್ತು. ಈ ಸಕಾರಾತ್ಮಕ ಯೋಚನೆಯಿಂದಲೇ ಮೈಯಲ್ಲಿ ರೋಮಾಂಚನ, ಒಳಗೆಲ್ಲ ಶಕ್ತಿಯ ಸಂಚಾರವಾದ ಅನುಭವ. ಇದೀಗ ಅವರ ಬದುಕಿಗೊಂದು ಲಕ್ಷ್ಯ ಸಿಕ್ಕಂತೆ ಅನಿಸಿತ್ತು. ಇನ್ನು ತನ್ನ ಅಂಧತ್ವವನ್ನು ತಾನು ಸಮಸ್ಯೆ ಎಂದು ತೆಗೆದುಕೊಳ್ಳುವುದಿಲ್ಲ. ಈ ಅಂಧತ್ವವನ್ನು ಬದಿಗಿಟ್ಟು ನಾನು ಮುನ್ನಡೆಯುತ್ತೇನೆ. ಅಲ್ಲಿಂದ ಹೊರಡಲು ಇಚ್ಛಿಸಿದರು. 'ಮರಳಿ ಬದುಕಿಗೆ ಈ ಪಯಣ' ಎಂದು ತಮಗೇ ಹೇಳಿಕೊಂಡರು.

ಪಕ್ಕದಲ್ಲಿ ಕುಳಿತಿದ್ದ ಗೆಳೆಯನಿಗೆ 'ಹೊರಡು, ನನ್ನ ಚಿಕಿತ್ಸೆ ಮುಗಿಯಿತು' ಎಂದರು. ಆತ ಏಕೆ? ಎಂಬಂತೆ ಭಾವೇಶ್ ಅವರತ್ತ ಪ್ರಶ್ನಾರ್ಥಕವಾಗಿ ನೋಡಿದ. 'ಏಳು, ನನಗೆ ಗುಣವಾಯಿತು' ಭಾವೇಶ್ ಹೇಳಿದರು. ಅವರ ಮಾತುಗಳ ಭಾವಾರ್ಥವನ್ನು ಅರಗಿಸಿಕೊಳ್ಳಲು ಗೆಳೆಯನಿಗೆ ಸಮಯ ಹಿಡಿಸಿತು. ಅದೇ ದಿನ ಸಿಕ್ಕಿದ ಮೊದಲ ರೈಲಿಗೆ ಹತ್ತಿ ಬಾಂಬೆಗೆ ಬಂದರು. ಅಲ್ಲಿಂದ ಬಸ್ಸು ಹಿಡಿದು ಮಹಾಬಲೇಶ್ವರ್ ತಲುಪಿದರು.

ಮನಸ್ಸಿನಲ್ಲಿ ತಮ್ಮ ಬದುಕಿನ ಲಕ್ಷ್ಯದತ್ತ ಯೋಚಿಸಿದರು. ತಾನು ಏನಾದರೂ ವಿಭಿನ್ನವಾದದ್ದನ್ನು ಮಾಡಬೇಕು ಎಂಬ ಯೋಚನೆ ಮೂಡಿತು. ಹೀಗೆಯೇ ಟೆಲಿಫೋನ್ ಆಪರೇಟರ್ ಕೆಲಸ ಮಾಡುತ್ತಾ ತಾನು ಮುಂದುವರೆದರೆ, ಜೀವನ ವ್ಯರ್ಥವಾಗುವುದು. ಆದರೆ ಮಾಡುವುದು ಏನನ್ನು? ಎಂದು ಹೊಳೆಯುತ್ತಿಲ್ಲ. 'ಸೀಕ್, ಯು ಶಲ್ ಫೈಂಡ್' ಮನಸ್ಸು ಹೇಳಿತ್ತು. ಹುಡುಕಿದರೆ ಹಾದಿ ತಂತಾನೆ ತೆರೆದುಕೊಳ್ಳುತ್ತದೆ. ಸಿಂಕ್ರೋನಿಸಿಟಿ ಎಂಬಂತೆ, ಅದೇ ದಿನ ಅವರಿಗೆ ಯಾರೋ ಬಾಂಬೆಯ 'ನ್ಯಾಷನಲ್ ಅಸೋಸಿಯೇಷನ್ ಫಾರ್ ದಿ ಬ್ಲೈಂಡ್'ನಲ್ಲಿ (ಎನ್.ಎ.ಬಿ) ಅಂಧ ವ್ಯಕ್ತಿಗಳಿಗೆ ಅನೇಕ ವಿಧದ ತರಪೇತು ಸಿಗುತ್ತದೆ ಎಂದೂ ತಿಳಿಸಿದರು. ಆಗಲೇ ಭಾವೇಶ್ ಅವರಿಗೆ ಈ ತರಪೇತಿಯನ್ನು ಪಡೆಯಲು ಬಾಂಬೆಗೆ ಹೋಗಬೇಕು ಎಂಬ ನಿರ್ಧಾರ ಮೂಡಿತು. ಇದ್ದಲ್ಲಿ, ಇರುವಲ್ಲಿ ಮುಂದುವರೆಯುವುದು ಆರಾಮ ಎನಿಸಬಹುದು. ಕೆಲವೊಮ್ಮೆ ನಮ್ಮ ಸಮಸ್ಯೆಗಳೂ ಅಭ್ಯಾಸವಾಗಿ ಹೋಗುತ್ತವೆ. ಪರಿಹಾರದ ಹಾದಿ ಪರ್ವತಾರೋಹಣ ಎಂಬಷ್ಟು ಪ್ರಯಾಸದ್ದಾಗಿ ಕಾಣುವಾಗ, ಇದ್ದಲ್ಲಿ ಇದ್ದಂತೆ ಇದೊಂದೇ ತನಗೆ ಗತಿಯೆಂದು ಸಾಗುವ ಆಯ್ಕೆ ಭಾವೇಶ್ ಅವರ ಎದುರಿತ್ತು. ತಮ್ಮ ಕನಸುಗಳ ಬೆನ್ನು ಹತ್ತಿ ಹೋಗಬೇಕು ಎಂದರೆ, ತಮ್ಮ ಈ 'ಕಂಫರ್ಟ್ ಜೋನ್' ಬಿಟ್ಟು ಹೊರಕ್ಕೆ ಹಾರಬೇಕಿತ್ತು. ಭಾವೇಶ್ ಟೆಲಿಫೋನ್ ಆಪರೇಟರ್ ಕೆಲಸವನ್ನು ಬಿಟ್ಟು ಹೊರಬಂದರು.

ತಂದೆಯನ್ನು ಒಬ್ಬರೇ ಬಿಟ್ಟು ಬಾಂಬೆಗೆ ಹೋಗಲು ಚಿಂತೆ. ಅಮ್ಮನ ಚಿಕಿತ್ಸೆಗೆಂದು ಇದ್ದ ಹಣವೆಲ್ಲ ವೆಚ್ಚವಾದ ಕಾರಣ, ಅವರ ಬಳಿ ಹಣವೂ ಇರಲಿಲ್ಲ. ಮೈ ತುಂಬಾ ಲಕ್ಷ ಲಕ್ಷಗಳ ಸಾಲ. ತಂದೆಯನ್ನು ಬಿಡಿಗಾಸಿಲ್ಲದೆ ಬಿಟ್ಟು ಹೋಗಲು ಮನಸ್ಸು ಅಂಜಿತು. ಒಂದಿಷ್ಟು ಹಣ ಸಂಪಾದನೆ ಮಾಡಿ, ತಂದೆಗೆ ಅಗತ್ಯದ ಆರ್ಥಿಕ ಸಹಾಯ ಒದಗಿಸಿ, ನಂತರ ಬಾಂಬೆಗೆ ಹೋಗಲು ನಿರ್ಧರಿಸಿದರು. ಸ್ನೇಹಿತರು ಸಂಬಂಧಿಗಳ ಬಳಿ ಕೇಳಲು ಮನಸ್ಸಾಗಲಿಲ್ಲ. ಅಮ್ಮನ ಚಿಕಿತ್ಸೆಗಾಗಿ ಅವರಿಂದ ಅದಾಗಲೇ ಕೊಂಡ ಸಾಲ